ಓ ಎಸ್ ನಂ 31/2015

ಡಿ. ಡಬ್ಲ್ಯೂ ಃ 2

ದಿಃ 18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ 2 ರವರ ಪರ ಶ್ರೀ ಎಂ ಸಿ ವಕೀಲರಿಂದ ಃ

ನಾನು ಎಸ್ ಎಸ್ ಎಲ್ ಸಿ ವರೆಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನನ್ನ ತಾಯಿ ತೀರಿಕೊಂಡು 4 ವರ್ಷಗಳಾಗಿರುತ್ತವೆ, ನನಗೆ ಈ ದಾವೆಯ ಸಂಪೂರ್ಣ ಮಾಹಿತಿ ತಿಳಿದಿರುತ್ತದೆ. ನನ್ನ ತಾಯಿಯವರು ಈ ದಾವೆಯಲ್ಲಿ ತಕರಾರನ್ನು ಹಾಕಿರುತ್ತಾರೆ, ಅದನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ದಾವೆಯನ್ನು ಹಾಕಿರುವುದು ನನ್ನ ಚಿಕ್ಕಮ್ಮ.

ದಾವಾ ಸ್ವತ್ತುಗಳಲ್ಲಿ 3 ಸ.ನಂ.ಗಳು ಇರುತ್ತವೆ. ಸದರಿ ದಾವಾ ಸ್ವತ್ತುಗಳು 2002 ರಲ್ಲಿ ವಿಭಾಗಕ್ಕೆ ಒಳಪಟ್ಟಿರುತ್ತವೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ದಾವಾ ಸ್ವತ್ತುಗಳು ಯಾರ ಯಾರ ಪಾಲಿಗೆ ಹೋಗಿರುತ್ತವೆ ಎಂದರೆ ನನ್ನ 3 ಜನ ಮಾವಂದಿರ ಹೆಸರಿಗೆ ಹೋಗಿರುತ್ತದೆ. ದಾವಾ ಶೆಡ್ಯೂಲ್ ಐಟಂ ನಂಬರ್ 1 ಸ.ನಂ. 16 ಆಗಿದ್ದು ಅದು 2 ಎಕರೆ 10 ಗುಂಟೆ ಇರುತ್ತದೆ. ಸದರಿ ಸ್ವತ್ತು ನನ್ನ ಮಾವ ಲಕ್ಷ್ಮಣಪ್ಪ ನವರಿಗೆ ಹೋಗಿತ್ತು ಎಂದರೆ ಸರಿ. ಸದರಿ ವಿಭಾಗವಾಗಿ ಲಕ್ಷ್ಮಣಪ್ಪ ನವರಿಗೆ ಹೋಗಿರುವ ಸ್ವತ್ತು ನನ್ನ ತಾಯಿ ಮತ್ತು ಚಿಕ್ಕಮ್ಮ ಕೋರ್ಟ್ ನಲ್ಲಿ ರಾಜಿ ಆಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ರಾಜಿ ನನ್ನ ತಾಯಿ ಮತ್ತು ಚಿಕ್ಕಮ್ಮ ನಿಗೆ ಎಷ್ಟು ಜಾಗ ಹಂಚಿಕೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿ ಹೆಬ್ಬೆಟ್ಟು ಹಾಕುತ್ತಿದ್ದರು ಎಂದರೆ ಸರಿ.

ಸದರಿ ರಾಜಿಯಂತೆ ನನ್ನ ತಾಯಿ ರೂ. 33 ಲಕ್ಷ ಮತ್ತು ನನ್ನ ಚಿಕ್ಕಮ್ಮ ರೂ. 33 ಲಕ್ಷ ಪಡೆದುಕೊಂಡಿದ್ದರು ಎಂದರೆ ಸರಿ. ನನಗೆ ನ್ಯಾಯಾಲಯದಲ್ಲಿ ರಾಜಿ ಆಗಿರುವ ವಿಚಾರ ಗೊತ್ತಿರುತ್ತದೆ ಆದರೆ ಸದರಿ ರಾಜಿಯಲ್ಲಿ ಎಷ್ಟು ಹಣ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ರಾಜಿಯಂತೆ ನನ್ನ ತಾಯಿ ಮತ್ತು ಚಿಕ್ಕಮ್ಮ ಹೆಬ್ಬೆಟ್ಟು ಹಾಕಿರುತ್ತಾರೆ ಎಂದರೆ ಸರಿ. ಸದರಿ ರಾಜಿ ದಿನಾಂಕ ಃ 06.12.2017 ರಲ್ಲಿ ಆಗಿರುತ್ತದೆ ಎಂದರೆ ಸರಿ. ಅದರಂತೆ ದಾವಾ ಐಟಂ ನಂಬರ್ 3 ಸ.ನಂ. 21/1 ರಲ್ಲಿ 1 ಎಕರೆ 1 ಗುಂಟೆ ಜಮೀನು ಆಗಿರುತ್ತದೆ. ನಾನು ಅದರಂತೆ ಸ.ನಂ. 22/2 ಆಗಿರುತ್ತದೆ ಎಂದರೆ ಇರಬಹುದು. ಅದರ ವಿಸ್ತೀರ್ಣ 1 ಎಕರೆ 4 ಗುಂಟೆ ಇರುತ್ತದೆ ಎಂದರೆ ಸರಿ.

ಸದರಿ ಐಟಂ ನಲ್ಲಿ ರಾಜಿಯಾದಾಗ ನನ್ನ ತಾಯಿ ಮತ್ತು ಚಿಕ್ಕಮ್ಮ ನವರು ತಲಾ ರೂ 14

ಲಕ್ಷ ಪಡೆದಿರುತ್ತಾರೆ ಎಂದರೆ ಸರಿ. ಸದರಿ ರಾಜಿ ಆದಾಗ ನಮ್ಮ ತಾಯಿ ಇರಲಿಲ್ಲ, ಆದರೆ ನಮ್ಮ ಮುಖಾಂತರವೇ ಸದರಿ ರಾಜಿಯಾಗಿರುತ್ತದೆ. ಆಗ ನಾನು ಮತ್ತು ನನ್ನ ಚಿಕ್ಕಮ್ಮ ರೂ 14 ಲಕ್ಷ ತಲಾ ಪಡೆದಿರುತ್ತೇವೆ ಎಂದರೆ ಸರಿ. ಅದರಂತೆ ನಮ್ಮ ಚಿಕ್ಕಮ್ಮ , ಅಣ್ಣ ತಂಗಿಯರು ಸಹಿ ಹಾಕಿರುತ್ತೇವೆ ಎಂದರೆ ಸರಿ. ಸದರಿ ರಾಜಿ ದಿನಾಂಕ : 21.11.2023 ರಲ್ಲಿ ಆಗಿರುತ್ತದೆ ಎಂದರೆ ಸರಿ.

ನಿ ಪಿ 12 ಶುದ್ಧ ಕ್ರಯಪತ್ರ ಕೆಂಗೇರಿಯಲ್ಲಿ ನೋಂದಣಿಯಾಗಿರುತ್ತದೆ. ಸದರಿ ನೋಂದಣಿಯಾದ ಸಂದರ್ಭದಲ್ಲಿ ನಾನು ಅಲ್ಲೇ ಇದ್ದೆ. ಸದರಿ ಕ್ರಯಪತ್ರಕ್ಕೆ ಒಟ್ಟು ಕುಟುಂಬದ ಎಲ್ಲ ಸದಸ್ಯರು ಸಹಿ ಮಾಡಿರುತ್ತಾರೆ. ಸಾಕ್ಷಿ ಯಾರು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನನ್ನ ತಂದೆಯ ಹೆಸರು ಪುರುಷೋತ್ತಮ. ಸದರಿ ಸಾಕ್ಷಿಗೆ ನನ್ನ ತಂದೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ಸಂದರ್ಭದಲ್ಲಿ ಇಲ್ಲದೇ ಇದ್ದ ಕಾರಣ ನನಗೆ ನಿ ಪಿ 12 ರಲ್ಲಿ ಯಾರು ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ನಿ ಪಿ 12 ರಲ್ಲಿ ಇರುವ ಸ್ವತ್ತನ್ನು ನನ್ನ ತಂದೆಯವರು ನಿಂತು ಮಾರಾಟ ಮಾಡಿಸಿರುತ್ತಾರೆ ಎಂದರೆ ಸುಳ್ಳು. ಸದರಿ ಸ್ವತ್ತಿನಲ್ಲಿ ಮಾರಾಟ ವಾದ ಹಣವನ್ನು ಯಾರು ಯಾರು ಹಂಚಿಕೊಂಡರು ಎಂದರೆ ಗೊತ್ತಿರುತ್ತದೆ, ಸದರಿ ಹಣವನ್ನು ನನ್ನ ಅಜ್ಜಿ, ತಾತ ಮತ್ತು ಮಾವನವರು ಹಂಚಿಕೊಂಡಿರುತ್ತಾರೆ. ಸದರಿ ಸ್ವತ್ತು ಎಷ್ಟು ಹಣಕ್ಕೆ ಮಾರಾಟವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಎಷ್ಟು ಹಣವನ್ನು ಹಂಚಿಕೊಂಡರು ಎಂದು ನನಗೆ ಗೊತ್ತಿಲ್ಲ. ಸದರಿ ಹಣವನ್ನು ನಮ್ಮ ತಾತ, ಅಜ್ಜಿ ಮತ್ತು ಮಾವಂದಿರು ಸ್ವೀಕರಿಸಿರುವುದಿಲ್ಲ, ನಾವೇ ಅದನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ನಿ ಡಿ 3 ನ್ನು ಹಾಕಿದ್ದು, ಅದರಲ್ಲಿ ರಾಮಯ್ಯ ಮತ್ತು ಅವರ ಮಕ್ಕಳು ವಿಭಾಗ ಪಟ್ಟಿಯನ್ನು ಮಾಡಿಕೊಂಡಿರುವ ಹಾಗೇ ಬರೆದಿರುತ್ತದೆ ಎಂದರೆ ಗೊತ್ತಿಲ್ಲ. ವಿಭಾಗಪಟ್ಟಿಯಂತೆ ಸದರಿ ರಾಮಯ್ಯ ಮತ್ತು ಅವರ ಮಕ್ಕಳು 3 ಜನರು ಎ , ಬಿ ಮತ್ತು ಸಿ ಶೆಡ್ಯೂಲ್ ನಂತೆ ಭಾಗ ಪಡೆದಿರುತ್ತಾರೆ ಎಂದರೆ ಸರಿ. ಆ ವಿಭಾಗದಂತೆ ನನ್ನ ಮಾವಂದಿರು ಪಹಣಿಯನ್ನು ಮತ್ತು ಎಂ ಆರ್ ನ್ನು ಬದಲಾವಣೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಸದರಿ ದಾವೆಯಲ್ಲಿ counter claim ಕೇಳಿರುತ್ತಾರೆ ಎಂದರೆ ಗೊತ್ತಿರುತ್ತದೆ. ನನ್ನ ತಾಯಿಗೆ 1/6 ನೇ ಭಾಗ ಬರಬೇಕೆಂದು ಕೇಳಿರುತ್ತಾರೆ ಎಂದರೆ ಸರಿ. ಸದರಿ ಭಾಗ ರೂ. 8 ಲಕ್ಷ ಆಗಿರುತ್ತದೆ ಎಂದು ಕೇಳಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ರೂ . 8 ಲಕ್ಷಕ್ಕಿಂತ ಹೆಚ್ಚಿನ ಹಣ ರೂ. 33 ಮತ್ತು 14 ರೂ. 14 ವನ್ನು ವಾದಿ ಮತ್ತು ನಾವು ಪಡೆದಿರುತ್ತೇವೆ ಎಂದರೆ ಸರಿ.

ವಾದಿ ಮತ್ತು ನನ್ನ ತಾಯಿ ಭಾಗ ಪಡೆದಿದ್ದರೂ ನಾನು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಸಾಕ್ಷಿ ನನ್ನ ತಾಯಿ ಮತ್ತು ಚಿಕ್ಕಮ್ಮ ರೂ 33 ಲಕ್ಷ ಮತ್ತು 14 ಲಕ್ಷ ಪಡೆದಿರುವುದು ಸತ್ಯ, ಅದೇ ರೀತಿ ನನ್ನ ತಾಯಿ ರೂ. 8 ಲಕ್ಷ ಕೇಳಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 2 , 3 ಮತ್ತು 4 ರವರ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**